*O.S./220/2022*
*P.W.1*

(ಸಾಕ್ಷಿಯನ್ನು ದಿನಾಂಕ: 03.01.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀ ಜೆ.ಆರ್., ವಾದಿ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ಅಂಶಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಇದನ್ನು ನಾನೇ ಹೇಳಿ ಬರೆಯಿಸಿ ನನ್ನ ಸಹಿಯನ್ನು ಮಾಡಿರುತ್ತೇನೆ.

ನನ್ನ ದಾವೆಗೆ ಪೂರಕವಾಗಿ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು ದಿನಾಂಕಃ 21.02.2019 ರ ಮೂಲ ನೋಂದಾಯಿತ ಕ್ರಯದ ಕರಾರು ಪತ್ರವನ್ನು ನಿ.ಪಿ.1 ಎಂದು, ದಿನಾಂಕಃ 18.02.2020 ರ ಮುಂದುವರೆದ ಮೂಲ ನೋಂದಾಯಿತ ಕ್ರಯದ ಕರಾರು ಪತ್ರವನ್ನು ನಿ.ಪಿ.2 ಎಂದು, ದಿನಾಂಕಃ 09.06.2022 ರಂದು ಪ್ರತಿವಾದಿಯರಿಗೆ ನೀಡಿದ ತಿಳುವಳಿಕೆ ಪತ್ರದ ಕಛೇರಿ ಪ್ರತಿಯನ್ನು ನಿ.ಪಿ.3 ಎಂದು, ನಾಲ್ಕು ಅಂಚೆ ರಶೀದಿಗಳನ್ನು ನಿ.ಪಿ.4 ರಿಂದ 7 ಎಂದು, ಜಾರಿಯಾಗದ ನಾಲ್ಕು ಅಂಚೆ ಲಕೋಟೆಗಳನ್ನು ಅನುಕ್ರಮವಾಗಿ ನಿ.ಪಿ.8 ರಿಂದ 11 ಎಂದು ಗುರುತಿಸಲಾಯಿತು. ನಿ.ಪಿ.8 ರಿಂದ 11 ಅಂಚೆ ಲಕೋಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ಹೊಡೆದು ನೋಡಲಾಗಿ ಅದರಲ್ಲಿರುವ ತಿಳುವಳಿಕೆ ಪತ್ರಗಳನ್ನು ಅನುಕ್ರಮವಾಗಿ ನಿ.ಪಿ.8(ಎ) ಇಂದ ನಿ.ಪಿ.11(ಎ) ಎಂದು ಗುರುತಿಸಲಾಯಿತು.

ನಿ.ಪಿ.1 ರ ದಾಖಲೆಯನ್ನು ನಾನು ಈಗ ನೋಡುತ್ತಿದ್ದೇನೆ. ನಿ.ಪಿ.1 ರ ದಾಖಲೆಯನ್ನು ಪ್ರತಿವಾದಿಯರು ನನಗೆ ಬರೆದುಕೊಟ್ಟಿರುತ್ತಾರೆ. ನಿ.ಪಿ.1 ರ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ನಾನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ 1 ನೇ ಮತ್ತು 2 ನೇ ಪ್ರತಿವಾದಿಯರು ಹಾಗೂ ಮೈನರ್ 3 ನೇ ಮತ್ತು 4 ನೇ

ಪ್ರತಿವಾದಿಯರ ಪರವಾಗಿ 1 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಗಳನ್ನು ಅನುಕ್ರಮವಾಗಿ ನಿ.ಪಿ.1(ಬಿ) ಇಂದ ನಿ.ಪಿ.1(ಡಿ) ಎಂದು ಗುರುತಿಸಲಾಯಿತು.

ನಿ.ಪಿ.1 ರ ದಾಖಲೆಗೆ ಸಾಕ್ಷಿದಾರರಾಗಿ ರಾಮಚಂದ್ರಯ್ಯ, ಕೃಷ್ಣ ಮತ್ತು ದಿನೇಶ್ ಕುಮಾರ್ ರವರು ಸಹಿ ಮಾಡಿರುತ್ತಾರೆ. ನಿ.ಪಿ.1 ರ ದಾಖಲೆಯಲ್ಲಿರುವ ಸದರಿಯವರ ಸಹಿಗಳನ್ನು ನಾನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಗಳನ್ನು ಅನುಕ್ರಮವಾಗಿ ನಿ.ಪಿ.1(ಇ) ಇಂದ ನಿ.ಪಿ.1(ಜಿ) ಎಂದು ಗುರುತಿಸಲಾಯಿತು.

ನಿ.ಪಿ.1 ರ ದಾಖಲೆಯನ್ನು ಪತ್ರಬರಹಗಾರರಾದ ಸಿ.ಎನ್.ಗಂಗಾಧರಯ್ಯರವರು ತಯಾರಿಸಿರುತ್ತಾರೆ. ಸದರಿಯವರ ಸಹಿಯನ್ನು ನಾನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಯನ್ನು ನಿ.ಪಿ.1(ಹೆಚ್) ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿ ನೀಡಿದ ಒಕ್ಕಣೆ ಮೇರೆಗೆ ಗಂಗಾಧರಯ್ಯರವರು ನಿ.ಪಿ.1 ದಾಖಲೆಯನ್ನು ತಯಾರಿಸಿರುತ್ತಾರೆ.

ನಿ.ಪಿ.2 ರ ದಾಖಲೆಯನ್ನು ನಾನು ಈಗ ನೋಡುತ್ತಿದ್ದೇನೆ. ನಿ.ಪಿ.2 ರ ದಾಖಲೆಯನ್ನು ಪ್ರತಿವಾದಿಯರು ನನಗೆ ಬರೆದುಕೊಟ್ಟಿರುತ್ತಾರೆ. ನಿ.ಪಿ.2 ರ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ನಾನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ 1 ನೇ ಮತ್ತು 2 ನೇ ಪ್ರತಿವಾದಿಯರು ಹಾಗೂ ಮೈನರ್ 3 ನೇ ಮತ್ತು 4 ನೇ ಪ್ರತಿವಾದಿಯರ ಪರವಾಗಿ 1 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಗಳನ್ನು ಅನುಕ್ರಮವಾಗಿ ನಿ.ಪಿ.2(ಬಿ) ಇಂದ ನಿ.ಪಿ.2(ಡಿ) ಎಂದು ಗುರುತಿಸಲಾಯಿತು.

ನಿ.ಪಿ.2 ರ ದಾಖಲೆಗೆ ಸಾಕ್ಷಿದಾರರಾಗಿ ಲೋಕೇಶ್ ಮತ್ತು ದಯಾನಂದ್. ಜೆ.ಎಂ

ರವರು ಸಹಿ ಮಾಡಿರುತ್ತಾರೆ. ನಿ.ಪಿ.2 ರ ದಾಖಲೆಯಲ್ಲಿರುವ ಸದರಿಯವರ ಸಹಿಗಳನ್ನು ನಾನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಗಳನ್ನು ಅನುಕ್ರಮವಾಗಿ ನಿ.ಪಿ.2(ಇ) ಮತ್ತು ನಿ.ಪಿ.2(ಎಫ್) ಎಂದು ಗುರುತಿಸಲಾಯಿತು.

ನಿ.ಪಿ.2 ರ ದಾಖಲೆಯನ್ನು ಪತ್ರಬರಹಗಾರರಾದ ಸಿ.ಎನ್.ಗಂಗಾಧರಯ್ಯರವರು ತಯಾರಿಸಿರುತ್ತಾರೆ. ಸದರಿಯವರ ಸಹಿಯನ್ನು ನಾನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಯನ್ನು ನಿ.ಪಿ.2(ಜಿ) ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿ ನೀಡಿದ ಒಕ್ಕಣೆ ಮೇರೆಗೆ ಗಂಗಾಧರಯ್ಯರವರು ನಿ.ಪಿ.2 ದಾಖಲೆಯನ್ನು ತಯಾರಿಸಿರುತ್ತಾರೆ.

***ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ವಕೀಲರು ಸಮಯವಕಾಶವನ್ನು ಕೋರಿದ್ದು ನೀಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

***ಸಹಿ/-***
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.